ತನ್ನ ಜೊತೆಗಿದ್ದಳು. ಇವರನ್ನು ಕಂಡು ಸುಶೀಲಾಗೆ ತುಂಬ ಖುಷಿಯಾಗಿತ್ತು. ದೀಪಾ ಹೋಟೆಲಿಗೆ ಬಂದಿದ್ದಕ್ಕೆ ಸುಶೀಲಾಳ ಸಂಭ್ರಮ ಹೆಚ್ಚಾಗಿತ್ತು. ಖುಷಿಯಿಂದ ಓಡಾಡುತ್ತಿದ್ದಳು. ಅದೊಂದು ಚೂರು, ಇದೊಂದು ಚೂರು ಎಂದು ಇವಳಿಗೆ ತಿನ್ನಿಸಿಯೇ ತಿನ್ನಿಸಿದಳು. ಅರಳು ಹುರಿದಂತೆ ಮಾತನಾಡುವ ಸುಶೀಲಾಳನ್ನು ಕಂಡು ದೀಪಾ ಸಂತಸಗೊಂಡಳು: 'ನೋಡಿ ಸ್ವಲ್ಪ ನಾಚ್ರಿ. ಆಕಿ ಫಟಾಫಟ್ ಎಷ್ಟ ಚೆಂದ ಮಾತಾಡ್ತಾಳು. ಊರಿನ ಇತಿಹಾಸ ಹೇಳ್ತಾಳು. ನೀವು ಅದೀರಿ. ಯಾವಾಗಲೂ ಬಾಯಿ ಬಿಕ್ಕೊಂಡು ಕುಂತೀರತೀರಿ.' ತನ್ನ ಅಭಿಮಾನ ಹೇಳಿಕೊಳ್ಳಲೆಂದು ತಾನೆಂದೆ: 'ಈ ದಡ್ಡಿ ಸುಶೀಲಾಗ ಏನ ಬರತಿತ್ತು. ಸಾಲಿಯೊಳಗ ಆಕಿ ದಡ್ಡಿ ಇದ್ಲು... ನಾನ ಆಕಿಗಿ ಕಲಿಸಿದೆ. ಅವಳಿಗೆ ಗಣಿತ, ವಿಜ್ಞಾನ ಕಲಿಸಿಕೊಟ್ಟಿದ್ದ ನಾನು...' —ಇವನು ಬಡಾಯಿ ಕೊಚ್ಚಿಕೊಂಡಿದ್ದೇ ತಡ, ದೀಪಾ ಕಣ್ಣರಳಿಸಿ ಹಾಂ! ಎಂದು ಉದ್ಗರಿಸಿದಳು. ಮೋಜು ಮುನಿಸಿನಿಂದ ಗೋಣು ಹಾಕುತ್ತ ಗಂಡನನ್ನವಳು ಅಡಿಯಿಂದ ಮುಡಿಯತನಕ ದಿಟ್ಟಿಸಿದಳು.

ಅವಳ ಆಶ್ಚರ್ಯಕ್ಕೆ ಸುಶೀಲಾಳೆ ಉತ್ತರ ಕೊಟ್ಟಳು: 'ಅಲ್ಲ ದೀಪಕ್ಕ, ಅಂವೇನು ಕಲಿಸ್ತಾನು? ಅಂವನ ಮಕಾ ನೋಡು. ಇಂವ ಕಾಲೇಜ ಕಲಿಯೋ ಮುಂದ ಅಮಾಸೆಗೊಮ್ಮೆ ಹೋಟೆಲಿಗೆ ಬರ್ತಿದ್ದ. ಅದು ಹೋಟೆಲ್ ಬಂದ್ ಇರುವಾಗನss ಬರಾಂವ...'

ದೀಪಾಗೆ ನಗು ತಡೆಯಲಾಗಲಿಲ್ಲ. ನಗುತ್ತಲೆ ಆಕೆ ಸುಶೀಲಾಳನ್ನು ಕೆಣಕಿದಳು. 'ಮುಂದ?'

'ಮುಂದೇನು? ನಾ ಚಾ ಕಪ್ ಕೊಡಲಿಕ್ಕೆ ಹೋದ್ರ ಇಂವನ ಕೈ ಥರಾಥರಾ ನಡಗತಿದ್ವು. ಎರಡು ಮೂರು ಸಲ ಗ್ಲಾಸ್ ಚೆಲ್ಲಿ ಹಾಳು ಮಾಡಿದ. ನನ್ನ ಮಕಾ ನೋಡಾಕ ಹೆದರಾಂವ ನನಗ ಮಾತು ಕಲಿಸೋದಂತೂ ದೂರನss ಉಳೀತು. ಹೌದಲ್ಲೋ? ಅಂಥಾ ಎದೆಗಾರಿಕೆ ಎಲ್ಲಿಂದ ಬರಬೇಕು ಇಂವಗ. ಇಂವಗ ಅಷ್ಟೊಂದು ಧೈರ್ಯ ಇದ್ದಿದ್ರ ಈಗಲೂ ಮಾಂವಗ ಹೆದರಿ ಉಚ್ಚಿ ಯಾಕ ಹೊಯ್ಕೊತಿದ್ದ...' ಸುಶೀಲಾ ಮತ್ತು ದೀಪಾ ನಕ್ಕೇ ನಕ್ಕಿದ್ದರು.

'ನೀ ಕರೆಕ್ಟ್ ಹೇಳಿದಿ ನೋಡು ಸುಶೀಲಾ. ನೀನss ಇನ್ನ ಮ್ಯಾಲ ಇಂವನ ಕಿವಿ ಹಿಂಡಿ ಬುದ್ಧಿ ಹೇಳು. ಅದರಿಂದಾದ್ರೂ ಸ್ವಲ್ಪ ಎಚ್ಚೆತ್ತಕೊಳ್ಳಲಿ. ಇಲ್ಲಾಂದ್ರ ಬೀದಿಗೆ ಬರ್ತಾನ...'

ಒಂದು ಸಲ ಊರ ಅಗಸಿಯ ಹತ್ತಿರ, ಮತ್ತೊಂದು ಸಲ ಈಶ್ವರ ದೇವಸ್ಥಾನದ ಹತ್ತಿರ ಸುಶೀಲಾ ಸಿಕ್ಕಿದ್ದಳು. 'ನಿನ್ನ ಜೋಡಿ ಸ್ವಲ್ಪ ವಿಷಯ ಮಾತಾಡೂದೈತಿ. ಸ್ವಲ್ಪ ಹೊತ್ತು ಇರು. ಇಲ್ಲಾ ಚಾದಂಗಡಿ ಕಡಿ ಬಾ.' ರಹಸ್ಯವೆಂಬಂತೆ ಅವಳು ಹೇಳಿದ್ದಳು. ಆದರೆ ಅದಕ್ಕೆ ತಾನು ಆಸ್ಪದ ಕೊಡಲಿಲ್ಲ. ಆಕೆಯ ಹತ್ತಿರ ಏನು ಗುಟ್ಟು ಮಾತಾಡುವುದು? ಅವಳ ಜೊತೆ ಮಾತಾಡುತ್ತ ನಿಂತರೆ ಸುಮ್ಮನೆ ಜನರ ಬಾಯಿಗೆ ಆಹಾರವಾಗುತ್ತೇನೆ. ಅವ್ವ ಬದುಕಿದ್ದಾಗಲೆ ಮಾವ ಚಾಡಿ ಹೇಳಿದ್ದ: 'ಸುಶೀಲಾನ ಜೋಡಿ ಇಂವ ಹೊತ್ತು ಗೊತ್ತಿಲ್ಲದ ನಿಂದರತಾನ... ನೋಡಿದ ಮಂದಿ ಏನು ತಿಳಕೊಳಲಿಕ್ಕಿಲ್ಲ. ನಮ್ಮ ಮನಿ ಮರ್ಯಾದಿ ತೆಗಿಲಿಕ್ಕೆಹತ್ಯಾನ...' ಅವ್ವ ತನ್ನಿಂದ ಆಣೆ ಹಾಕಿಸಿಕೊಂಡಳು. ಅವಳು ಬದುಕಿರುವವರೆಗೂ ತಾನು ಹೋಟೆಲಿನತ್ತ ಕಾಲು ಹಾಕಬಾರದು. ಆದರೆ ಆ ವಚನವನ್ನು ದೀಪಾ ಮುರಿಸಿದ್ದಳು. ಅಲ್ಲಿಗೆ ಮತ್ತೆ ಕಾಲು ಇಡಲು ಹಚ್ಚಿದವಳೇ ದೀಪಾ: 'ನಿಮ್ಮ ಅವ್ವ ಹೇಳಿದಂಗ ಕೇಳಕೊಂಡ ಬಿದ್ದಿಯಲ್ಲ, ಅದಕ್ಕ ಇಷ್ಟು ಬುದ್ದು ಆಗೀದಿ. ನಿಮ್ಮ ಮಾಂವನ ವ್ಯವಹಾರ ಈ ಹೋಟೆಲದಾಗು ಐತಿ. ಸುಶೀಲಾನ ಅಪ್ಪಗ ಸಾಲ ಕೊಟ್ಟಾನಂತ. ಅದಕ್ಕ ಹೋಟೆಲ್ ತನಗ ಬರದಕೊಡು ಅಂತ ಕುಂತಾನಂತ... ಸುಶೀಲಾ ಕುಂಡ್ರುವಂತ ಗಲ್ಲೆದ ಮ್ಯಾಲ ತಾನು ಕುಂಡ್ರಾವಂತ... ಅದನ್ನ ಕೇಳಿ ಆಕಿ ಕೆಂಡ ಆಗಿದ್ಲು... ಸುಶೀಲಾ ಪ್ರಶ್ನೆ ಮಾಡಿದಾಗ ತಾನು ಹಂಗ ಕೇಳೇ ಇಲ್ಲ ಅಂತ ಹೇಳಿದ್ನಂತ...' ಓಹ್! ಏನೆಲ್ಲ